	ದೊಡ್ಡಕೆರೆ			
16	ಸೋಮಿನಕೊಪ್ಪ ಬಳಸೋಕೆರೆ	0.495	–	–
17	ಬೂದಿಗೆರೆ ಕೆರೆ	3.48	–	–
18	ಗೋಪಿಶೆಟ್ಟಿಕೊಪ್ಪ ದೊಡ್ಡಕೆರೆ	0.99	–	–
19	ಕಲ್ಲೂರು ದೊಡ್ಡಕೆರೆ	1.99	–	–
20	ರಾಮೇನಕೊಪ್ಪ ಸುಂಕದಕಟ್ಟೆಕೆರೆ	2.97	–	–
21	ಬೆನವಳ್ಳಿ ದೊಡ್ಡಕೆರೆ	–	–	–
22	ಕಡೇಕಲ್ ದೊಡ್ಡಕೆರೆ	2.056	–	–
23	ಲಕ್ಕಿನಕೊಪ್ಪ ತೋಟದಕೆರೆ	–	–	–
24	ಲಕ್ಕಿನಕೊಪ್ಪ ತಿಪ್ಪೇಸ್ವಾಮಿ ಕೆರೆ	1.02	0.99	–
25	ಲಕ್ಕಿನಕೊಪ್ಪ ಹೊನ್ನೆಹಳ್ಳ ಕೆರೆ	2.49	0.89	–
26	ಸಿದ್ಲಿಪುರ ಕಡ್ಲೆಕಟ್ಟೆಕೆರೆ	2.95	–	–
27	ಅಬ್ಬಲಗೆರೆ ಹೊಸಕೆರೆ	0.96	–	–
28	ಬೊಮ್ಮನಕಟ್ಟೆ ಬಳಸೋಕೆರೆ	1.73	–	–
	ಒಟ್ಟು ಮೊತ್ತ	**44.061**	**20.67**	**18.11**

442 ಶ್ರೀ ಕುಮಾರಸ್ವಾಮಿ ಕೆ.ಜಿ.(ಶಿವಮೊಗ್ಗ ಗಾಮಾಂತರ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾ ಜಲಾಶಯದ ಮುಖ್ಯ ಕಾಲುವೆ ಹಾಗೂ ಉಪ ಕಾಲುವೆಗಳ ಆಧುನೀಕರಣಕ್ಕಾಗಿ ಬಿಡುಗಡೆ ಮಾಡಲಾದ 935 ಕೋಟಿ ರೂಪಾಯಿಗಳಲ್ಲಿ ಬಿಲ್ ಪಾವತಿಸಿದ ಮೊಬಲಗು ಎಷ್ಟು; (ಸಬ್ ಡಿವಿಜನ್ ವಾರು ವಿವರ ಒದಗಿಸುವುದು)

ಆ) ಕಳಪೆ ಕಾಮಗಾರಿಯಾದ ರೀಚಗಳ ವಿವರ ನೀಡುವುದು; **BRLBC** ಭದ್ರಾವತಿ ವಿಭಾಗೀಯ ಕಛೇರಿಯಲ್ಲಿನ ಅವ್ಯವಹಾರಗಳ ಬಗ್ಗೆ ಸಾರ್ವಜನಿಕರ ದೂರುಗಳಿಗೆ **CE** ಯು.ಟಿ.ಪಿ. ಶಿವಮೊಗ್ಗ ಸರ್ಕಾರಕ್ಕೆ ಸಲ್ಲಿಸಿದ ವರದಿಯ ಕುರಿತು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ; (ವಿವರ ಒದಗಿಸುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಭದ್ರಾ ನಾಲಾ ಆಧುನೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಉಪ ವಿಭಾಗವಾರು ಬಿಲ್ ಪಾವತಿಸಿದ ವಿವರಗಳು ಈ ಕೆಳಕಂಡಂತಿವೆ.

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಪ್ಯಾಕೇಜ್ ಸಂಖ್ಯೆ	ಉಪವಿಭಾಗ	ಬಿಲ್ ಪಾವತಿಸಿದ ಮೊಬಲಗು
1	1(ಎ), 1(ಬಿ), 1(ಸಿ), 1(ಡಿ), 2ಸಿ(4), 2ಸಿ(5), 2ಸಿ(6)	ನಂ–3, ಬಿ.ಆರ್.ಎಲ್.ಬಿ.ಸಿ.ಉಪ ವಿಭಾಗ, ಭದ್ರಾವತಿ	460.74
2	2(ಎ), 2ಸಿ(3)	ನಂ–1, ಬಿ.ಆರ್.ಎಲ್.ಬಿ.ಸಿ ಉಪ ವಿಭಾಗ, ಬಿ.ಆರ್.ಪ್ರಾಜೆಕ್ಟ್	665.85
3	2(ಬಿ), 2ಸಿ(10), 2ಸಿ(11)	ನಂ–2, ಬಿ.ಆರ್.ಆರ್.ಬಿ.ಸಿ ಉಪ ವಿಭಾಗ, ಡಿ.ಬಿ.ಹಳ್ಳಿ.	6579.11
4	2ಸಿ(1)	ತುಂಗಾ ಮೇಲ್ದಂಡೆ ಯೋಜನೆ ಉಪ ವಿಭಾಗ, ಗಾಜನೂರು.	952.00
5	2ಸಿ(7), 2ಸಿ(8)	ನಂ–4 ತುಂಗಾ ಅಣೆಕಟ್ಟು ಉಪ ವಿಭಾಗ, ಶಿವಮೊಗ್ಗ.	296.28
6	3 ಭಾಗಶಃ 6(ಸಿ)	ನಂ–1 ಭದ್ರಾ ನಾಲಾ ಉಪ ವಿಭಾಗ, ಬಸವಾಪಟ್ಟಣ.	7654.91
7	3 ಭಾಗಶಃ	ನಂ–3, ಭದ್ರಾ ನಾಲಾ ಉಪವಿಭಾಗ,ಮಲೆಬೆನ್ನೂರು	1804.97
8	4(ಎ), 4(ಬಿ)	ನಂ–3, ಭದ್ರಾ ನಾಲಾ ಉಪವಿಭಾಗ, ತ್ಯಾವಣಗಿ	5560.60

9	5(ಎ), 6(ಬಿ)ಭಾಗಶಃ	ನಂ–2, ಭದ್ರಾ ನಾಲಾ ಉಪ ವಿಭಾಗ, ದಾವಣಗೆರೆ.	9254.91
10	5(ಬಿ)	ನಂ–1, ಭದ್ರಾ ನಾಲಾ ಉಪ ವಿಭಾಗ, ದಾವಣಗೆರೆ.	4904.90
11	6(ಎ)	ನಂ–4, ಭದ್ರಾ ನಾಲಾ ಉಪ ವಿಭಾಗ, ಸಾಸ್ವೆಹಳ್ಳಿ.	6442.00
12	6(ಬಿ)ಭಾಗಶಃ	ನಂ–4, ಭದ್ರಾ ನಾಲಾ ಉಪ ವಿಭಾಗ, ಹರಿಹರ.	892.96
ಒಟ್ಟು			**45469.23**

ಆ) ಭದ್ರಾ ಆಧುನೀಕರಣ ಕಾಮಗಾರಿಗಳು ಕಳಪೆಯಾಗಿರುವ ಬಗ್ಗೆ ಯಾವುದೇ ನಿರ್ದಿಷ್ಟ ದೂರುಗಳು ಬಂದಿರುವುದಿಲ್ಲ.

ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ನ್ಯೂನತೆಗಳು ಕಂಡುಬಂದ ಪ್ರಕರಣಗಳಲ್ಲಿ ಟೆಂಡರ್ ನಿಯಮಾವಳಿಗಳ ಪ್ರಕಾರ ಸಂಬಂಧಪಟ್ಟ ಗುತ್ತಿಗೆದಾರರಿಂದಲೇ ದೋಷಗಳು ಸರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕೆಲಸದಲ್ಲಿ ನಿರ್ಲಕ್ಷತೆ ತೋರಿದ ಕಾರ್ಯಪಾಲಕ ಇಂಜಿನಿಯರ್, ಭದ್ರಾವತಿ ವಿಭಾಗ ಇವರನ್ನು ವರ್ಗಾಯಿಸಲಾಗಿದೆ.

724 ಶ್ರೀ ಮಾರಿಹಾಲ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಐತಿಹಾಸಿಕ ಸ್ಥಳವಾದ ಕಿತ್ತೂರು ಪಟ್ಟಣವನ್ನು ತಾಲ್ಲೂಕನ್ನಾಗಿ ಘೋಷಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ನಿರ್ದಿಷ್ಟ ದಿನಾಂಕ ತಿಳಿಸುವುದು;

ಆ) ಬೆಳಗಾವಿ ಐತಿಹಾಸಿಕ ಅಧಿವೇಶನದಲ್ಲಿ ಮೇ, 2009ರೊಳಗೆ ಕಿತ್ತೂರನ್ನು ತಾಲ್ಲೂಕನ್ನಾಗಿ ಘೋಷಣೆ (ಸಿಹಿ ಸುದ್ದಿ) ಮಾಡುವುದಾಗಿ ಸರ್ಕಾರ ತಿಳಿಸಿದ್ದು ನಿಜವೇ;

ಇ) ನಿಜವಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ), ಆ) ಮತ್ತು ಇ) ಸರ್ಕಾರವು ಶ್ರೀ ಎಂ.ಬಿ.ಪ್ರಕಾಶ್‌ರವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ತಾಲ್ಲೂಕು ಪುನರ್ ರಚನಾ ಸಮಿತಿಯು ತನ್ನ